SURYANARAYANA S
Digitally signed by SURYANARAYANA S
Date: 2024.04.08 17:46:25 -0500

<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ.ರವರ ನ್ಯಾಯಾಲಯ ಖಾನಾಪೂರ</u>

<u>ಉಪಸ್ಥಿತರು</u>

ಶ್ರೀ.ಸೂರ್ಯನಾರಾಯಣ ಎಸ್. ಬಿ,ಎ,ಎಲ್., ಎಲ್.ಎಲ್.ಬಿ.
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ.,
ಖಾನಾಪೂರ.

ದಿನಾಂಕ: 08 ನೇ ಏಪ್ರಿಲ್ ಮಾಹೆ 2023

**<u>ಸಿ.ಸಿ.ನಂ: 2076/2022</u>**

ಫಿರ್ಯಾಧುದಾರರು : ಸರ್ಕಾರದ ಪರವಾಗಿ ಅಬಕಾರಿ ಪೊಲೀಸರು,
ಖಾನಾಪುರ.
(ಸ.ಸ.ಅ.)

ಃ ವಿರುದ್ಧ ಃ

ಆರೋಪಿ: ಪಾಂಡುರಂಗ ಸಾತೇರಿ ಪಾಟೀಲ
ವಯಸ್ಸುಃ42 ವರ್ಷ,
ವಾಸಃ ತೋರಳಿ ತಾಃಖಾನಾಪೂರ
(ಆರೋಪಿ ಪರವಾಗಿ- ಶ್ರೀ. ಎನ್ ವೈ ಎಂ, ವಕೀಲರು)

| | |
|---|---|
| ಅಪರಾಧ ದಿನಾಂಕ | 17.03.2022 |
| ಅಂತಿಮ ವರದಿ ದಿನಾಂಕ | 21.07.2022 |
| ಆರೋಪಿತರ ಬಂಧನ ವಿವರ | ಆರೋಪಿಯು ನ್ಯಾಯಾಲಯದಿಂದ ಜಾಮೀನು ಪಡೆದುಕೊಂಡಿರುತ್ತಾನೆ. |
| ಫಿರ್ಯಾದಿಯ ಹೆಸರು | ಶ್ರೀ ಜಯರಾಮ ಹೆಗಡೆ |
| ಫಿರ್ಯಾದಿ ದಿನಾಂಕ | 17.03.2022 |
| ಸಾಕ್ಷಿಯ ಮುಕ್ತಾಯದ ದಿನಾಂಕ | 12.03.2024 |
| ಆಪಾದಿಸಲ್ಪಟ್ಟ ಅಪರಾಧಗಳು | ಕರ್ನಾಟಕ ಅಬಕಾರಿ ಕಾಯ್ದೆ ಕಲಂ 32, ಮತ್ತು 34 |
| ನ್ಯಾಯಾಧೀಶರ ತೀರ್ಮಾನ | ಆರೋಪಿಯ ಬಿಡುಗಡೆ. |

*****

<u>ತೀರ್ಪು</u>

ಅಬಕಾರಿ ನಿರೀಕ್ಷಕರು, ಖಾನಾಪೂರ ವಲಯ, ಖಾನಾಪೂರ, ಇವರು ಆರೋಪಿಯ ವಿರುದ್ದ ಕರ್ನಾಟಕ ಅಬಕಾರಿ ಕಾಯ್ದೆ ಕಲಂ 32, ಮತ್ತು 34 ರ ರೀತ್ಯಾ ಶಿಕ್ಷಾರ್ಹವಾದ ಅಪರಾಧಕ್ಕಾಗಿ ದೋಷಾರೋಪಣಾ ಪಟ್ಟಿಯನ್ನು ದಾಖಲಿಸಿರುತ್ತಾರೆ.

2. ಅಭಿಯೋಜನೆಯವರ ಪ್ರಕರಣದ ಸಂಕ್ಷಿಪ್ತ ಸಾರಾಂಶ ಈ ಕೆಳಕಂಡಂತೆ ಇರುತ್ತದೆ :-

ದಿನಾಂಕಃ 17.03.2022 ರಂದು ಮುಂಜಾನೆ 7.00 ಗಂಟೆ ಸಮಾರಿಗೆ ಚಾಸಾ.1 ಹಾಗೂ ಸಿಬ್ಬಂದಿ ಸೇರಿಕೊಂಡು ಖಚಿತ ಮಾಹಿತಿ ಮೇರೆಗೆ ತೋರಳಿ ಗ್ರಾಮದ ಆರೋಪಿತನ ಮನೆಯ ಮೇಲೆ ದಾಳಿ ಮಾಡಿದ್ದು, ಆರೋಪಿಯು ಸಮಸ್ತದಲ್ಲಿರುವ ತಮ್ಮನ್ನು ನೋಡಿ ಹಿಂದಿನ ಬಾಗಿಲಿನಿಂದ ಓಡಿಹೋಗಿದ್ದು, ನಂತರ ಚಾಸಾ, 1 ರವರು ಶೋದನಾ ಸಮುಚಿತ ವರದಿಯನ್ನು ಬರೆದುಕೊಂಡು ಮನೆಯನ್ನು ಶೋಧಿಸಲಾಗಿ ಯಾವುದೇ ಪಾಸ್ ಪರ್ಮಿಟ್ ಇಲ್ಲದೇ ತನ್ನ ಸ್ವಂತ ಪಾಯಿದೆಗೋಸ್ಕರ ಮನೆಯ ಹಿತ್ತಲಲ್ಲಿರುವ ಭತ್ತದ ಹುಲ್ಲಿನಲ್ಲಿ ಗೋವಾ ರಾಜ್ಯದ 1) 750 ಎಂ. ಎಲ್ ನ 24 ಬ್ಲ್ಯೂ-7 ವಿಸ್ಕಿ ಬಾಟಲಿಗಳು 2) 750 ಎಂ.) ಎಲ್ ನ 4 ಮೆಕಡೋವೆಲ್ಸ XXX ರಮ್ ಬಾಟಲಿಗಳು, 3) 180 ಎಂ. ಎಲ್ ನ 48 ಬ್ಲ್ಯೂ-7 ವಿಸ್ಕಿ ಬಾಟಲಿಗಳು 4) 180 ಎಂ. ಎಲ್ ನ 08 ರಿಯಲ್ಸ್ XXX ರಮ್ ಬಾಟಲಿಗಳನ್ನು ಹೋಳಿ ಗುಣ್ಣಿಮ ಹಬ್ಬದ ನಿಮಿತ್ಯ ಮಾರಾಟ ಮಾಡುವ ಉದ್ದೇಶದಿಂದ ಸಂಗ್ರಹಿಸಿ ಇಟ್ಟು ಕೊಂಡಿರುವುದು ಕಂಡು ಬಂದಿದ್ದು, ಸದರಿ ಮಧ್ಯದ ಬಾಟಲಿಗಳನ್ನು ವಶಕ್ಕೆ ತೆಗೆದುಕೊಂಡು, ಪಂಚರ ಸಮಕ್ಷಮ ಪಂಚನಾಮೆ ಮಾಡಿ ಮಧ್ಯದ ಬಾಟಲಿಗಳನ್ನು ವಶಪಡಿಸಿಕೊಂಡು ಪ್ರಕರಣ ದಾಖಲಿಸಿ,

ತನಿಖೆಯಿಂದ ಆರೋಪಿ ಅಪರಾಧ ಎಸಗಿರುವುದು ಕಂಡು ಬಂದಿದ್ದು, ರಾಸಾಯನಿಕ ಪರೀಕ್ಷೆಗೆ ಕಳುಹಿಸಿದ್ದ ಸ್ಯಾಂಪಲ್ ವರದಿ ಬಂದ ನಂತರ ಆರೋಪಿಯ ವಿರುದ್ಧ ಆರೋಪ ಸಾಬೀತಾದುದರಿಂದ ಅಂತಿಮ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಲಾಗಿದೆ ಎಂದು ಅಭಿಯೋಜನೆಯ ಮೊಕದ್ದಮೆಯಾಗಿದೆ.

3. ತನಿಖಾಧಿಕಾರಿಯು ನ್ಯಾಯಾಲಯಕ್ಕೆ ದೋಷಾರೋಪಣಾ ಪತ್ರವನ್ನು ಸಲ್ಲಿಸಿದ ನಂತರ ಕರ್ನಾಟಕ ಅಬಕಾರಿ ಕಾಯ್ದೆ ಕಲಂ 32, 34, 38(ಎ) ರಡಿ ಶಿಕ್ಷಾರ್ಹವಾದ ಅಪರಾಧಕ್ಕಾಗಿ ಸಂಜ್ಞೇಯವನ್ನು ತೆಗೆದುಕೊಂಡು ಆರೋಪಿಗೆ ಸಮನ್ಸ್ ಹೊರಡಿಸಲಾಯಿತು. ನಂತರ ಆರೋಪಿಯು ನ್ಯಾಯಾಲಯಕ್ಕೆ ತಮ್ಮ ವಕೀಲರ ಮೂಲಕ ಹಾಜರಾಗಿ ಜಾಮೀನು ಅರ್ಜಿ ಸಲ್ಲಸಿ, ಜಾಮೀನಿನ ಮೇಲೆ ಬಿಡುಗಡೆ ಹೊಂದಿರುತ್ತಾರೆ. ಆರೋಪಿಗೆ ದಂ.ಪ್ರ.ಸಂ. ಕಲಂ 207 ರಡಿಯಲ್ಲಿ ಅಭಿಯೋಜನೆಯ ಮೊಕದ್ದಮೆ ದಾಖಲೆಗಳನ್ನು ಮತ್ತು ದೋಷಾರೋಪಣಾ ಪತ್ರದ ನಕಲನ್ನು ಒದಗಿಸಿ, ದೋಷಾರೋಪಣೆಯನ್ನು ರಚಿಸಿ, ಓದಿ ಹೇಳಲಾಗಿ, ಆರೋಪಿಯು ಯಾವುದೇ ತಪ್ಪು ಮಾಡಿಲ್ಲವೆಂದು, ಪ್ರಕರಣದ ವಿಚಾರಣೆಯಾಗಬೇಕೆಂದು ಹೇಳಿದ ಮೇರೆಗೆ ಅಭಿಯೋಜನೆಯ ಪರವಾಗಿ ಸಾಕ್ಷಿದಾರರಿಗೆ ಸಮನ್ಸ್ ಹೊರಡಿಸಲಾಗಿರುತ್ತದೆ.

4. ಆರೋಪಿಯ ವಿರುದ್ಧ ಆರೋಪಿಸಲಾದ ದೋಷಾರೋಪಣೆಯನ್ನು ಸಾಬೀತುಪಡಿಸುವ ಸಲುವಾಗಿ ಅಭಿಯೋಜನೆಯು ದೋಷಾರೋಪಣಾ ಪಟ್ಟಿಯಲ್ಲಿ ತೋರಿಸಿರುವ ಒಟ್ಟು 8 ಜನ ಸಾಕ್ಷಿದಾರರ ಪೈಕಿ 5 ಜನ ಸಾಕ್ಷಿದಾರರನ್ನು ಫ್ರಾಸಾ.1 ರಿಂದ 5 ಎಂದು ವಿಚಾರಣೆಗೆ ಒಳಪಡಿಸಿ, ನಿಪಿ.1 ರಿಂದ 6 ದಾಖಲೆಗಳನ್ನು ಮತ್ತು ಮು.ಮಾ.1 ರಿಂದ 4 ನ್ನು ಗುರುತಿಸಿಕೊಂಡಿರುತ್ತದೆ. ಅಭಿಯೋಜನೆಯ ಪರ ವಿಚಾರಣೆ ಮುಕ್ತಾಯಗೊಂಡ ನಂತರ ಅ.ಪ್ರ.ಸಂ. ಕಲಂ 313 ರ ಅಡಿಯಲ್ಲಿ ಆರೋಪಿತನ

ಹೇಳಿಕೆಯನ್ನು ದಾಖಲು ಮಾಡಿಕೊಳ್ಳಲಾಗಿದೆ. ಆರೋಪಿಯು ತಮ್ಮ ಹೇಳಿಕೆಯಲ್ಲಿ ಅಭಿಯೋಜನೆಯ ಸಾಕ್ಷಿದಾರರು ತಮ್ಮ ವಿರುದ್ಧ ನೀಡಿರುವ ಸಾಕ್ಷ್ಯವನ್ನು ಸಂಪೂರ್ಣವಾಗಿ ಸುಳ್ಳು ಎಂದು ಅಲ್ಲಗಳೆದಿದ್ದು, ತನ್ನ ಪರವಾಗಿ ಯಾವುದೇ ಸಾಕ್ಷಿದಾರರನ್ನು ವಿಚಾರಣೆ ಮಾಡಿರುವುದಿಲ್ಲ ಹಾಗೂ ದಾಖಲಾತಿಗಳನ್ನು ಗುರುತಿಸಿಕೊಂಡಿರುವುದಿಲ್ಲ.

5. ಕಡತದಲ್ಲಿನ ದಾಖಲಾತಿಗಳನ್ನು ಪರಿಶೀಲಿಸಿದ ನಂತರ ನ್ಯಾಯಾಲಯದ ಪರಿಗಣನೆಗೆ ಪ್ರಕರಣದ ನ್ಯಾಯೋಚಿತ ಇತ್ಯರ್ಥಕ್ಕಾಗಿ ಈ ಕೆಳಕಂಡ ಅಂಶಗಳು ಉದ್ಭವಿಸಿರುತ್ತವೆ.

1. ದಿನಾಂಕಃ 17.03.2022 ರಂದು ಮುಂಜಾನೆ 7.00 ಗಂಟೆ ಸಮಾರಿಗೆ ಚಾಸಾ.1 ಹಾಗೂ ಸಿಬ್ಬಂದಿ ಸೇರಿಕೊಂಡು ಖಚಿತ ಮಾಹಿತಿ ಮೇರೆಗೆ ತೋರಳಿ ಗ್ರಾಮದ ಆರೋಪಿತನ ಮನೆಯ ಮೇಲೆ ದಾಳಿ ಮಾಡಿದ್ದು, ಆರೋಪಿಯು ಗೋವಾ ರಾಜ್ಯದ 1) 750 ಎಂ. ಎಲ್ ನ 24 ಬ್ಲ್ಯೂ-7 ವಿಸ್ಕಿ ಬಾಟಲಿಗಳು 2) 750 ಎಂ.) ಎಲ್ ನ 4 ಮೆಕಡೋವೆಲ್ಸ XXX ರಮ್ ಬಾಟಲಿಗಳು, 3) 180 ಎಂ. ಎಲ್ ನ 48 ಬ್ಲ್ಯೂ-7 ವಿಸ್ಕಿ ಬಾಟಲಿಗಳು 4) 180 ಎಂ. ಎಲ್ ನ 08 ರಿಯಲ್ XXX ರಮ್ ಬಾಟಲಿಗಳನ್ನು ಸಂಗ್ರಹಿಸಿದ್ದು, ಆ ರೀತ್ಯಾ ಕರ್ನಾಟಕ ಅಬಕಾರಿ ಕಾಯ್ದೆ ಕಲಂ 32(1) ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತಾರೆಂದು ಅಭಿಯೋಜನೆಯವರು ಸಂಶಯಾತೀತವಾಗಿ ರುಜುವಾತುಪಡಿಸುತ್ತಾರೆಯೇ?
2. ಮೇಲ್ಕಂಡ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ ಆರೋಪಿಯು ಯಾವುದೇ ಅಧೀಕೃತ ಪಾಸ್ ಅಥವಾ ಪರ್ಮಿಟ್ ಅಥವಾ ಪರವಾನಗಿ ಸಾರಾಯಿಯನ್ನು ಸ್ವಂತ ಫಾಯ್ದೆಗೋಸ್ಕರ ಭತ್ತದ ಹುಲ್ಲಿನಲ್ಲಿ ಮಧವನ್ನು ಸಂಗ್ರಹಿಸಿದ್ದು, ಆ ರೀತ್ಯಾ ಕರ್ನಾಟಕ ಅಬಕಾರಿ ಕಾಯ್ದೆ ಕಲಂ 34 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತಾರೆಂದು ಅಭಿಯೋಜನೆಯವರು ಸಂಶಯಾತೀತವಾಗಿ ರುಜುವಾತುಪಡಿಸುತ್ತಾರೆಯೇ?
3. ಯಾವ ಆದೇಶ?

6. ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರ ಹಾಗೂ ಆರೋಪಿಯ ಪರ ವಕೀಲರ ವಾದವನ್ನು ಆಲಿಸಿ, ಕಡತದ ದಾಖಲಾತಿಗಳು, ಸಾಕ್ಷಿದಾರರ ಹೇಳಿಕೆಗಳನ್ನು ಪರಿಶೀಲಿಸಿದ ನಂತರ ಮೇಲ್ಕಂಡ ಅಂಶಗಳಿಗೆ ಕೆಳಕಂಡಂತೆ ಉತ್ತರಿಸಲಾಗಿದೆ.

ಅಂಶ ಸಂಖ್ಯೆ1 ಮತ್ತು 2 : ನಕಾರಾತ್ಮಕವಾಗಿ
ಅಂಶ ಸಂಖ್ಯೆ 3 : ಅಂತಿಮ ಆದೇಶದಂತೆ
ಈ ಕೆಳಕಂಡ ಕಾರಣಗಳಿಂದ.

<u>ಕಾರಣಗಳು</u>

7. **<u>ಅಂಶ ಸಂಖ್ಯೆ1 ಮತ್ತು 2</u>:** ದಿನಾಂಕಃ 17.03.2022 ರಂದು ಮುಂಜಾನೆ 7.00 ಗಂಟೆ ಸಮಾರಿಗೆ ಚಾಸಾ.1 ಹಾಗೂ ಸಿಬ್ಬಂದಿ ಸೇರಿಕೊಂಡು ಖಚಿತ ಮಾಹಿತಿ ಮೇರೆಗೆ ತೋeರಳಿ ಗ್ರಾಮದ ಆರೋಪಿತನ ಮನೆಯ ಮೇಲೆ ದಾಳಿ ಮಾಡಿದ್ದು, ಆರೋಪಿಯು ಸಮಸ್ತ್ರದಲ್ಲಿರುವ ತಮ್ಮನ್ನು ನೋಡಿ ಹಿಂದಿನ ಬಾಗಿಲಿನಿಂದ ಓಡಿಹೋಗಿದ್ದು, ನಂತರ ಚಾಸಾ, 1 ರವರು ಶೋದನಾ ಸಮುಚಿತ ವರದಿಯನ್ನು ಬರೆದುಕೊಂಡು ಮನೆಯನ್ನು ಶೋಧಿಸಲಾಗಿ ಯಾವುದೇ ಪಾಸ್ ಪರ್ಮಿಟ್ ಇಲ್ಲದೇ ತನ್ನ ಸ್ವಂತ ಪಾಯಿದೆಗೊಸ್ಕರ ಮನೆಯ ಹಿತ್ತಲಲ್ಲಿರುವ ಭತ್ತದ ಹುಲ್ಲಿನಲ್ಲಿ ಗೋವಾ ರಾಜ್ಯದ 1) 750 ಎಂ. ಎಲ್ ನ 24 ಬ್ಲ್ಯೂ-7 ವಿಸ್ಕಿ ಬಾಟಲಿಗಳು 2) 750 ಎಂ.) ಎಲ್ ನ 4 ಮೆಕಡೋವೆಲ್ಸ XXX ರಮ್ ಬಾಟಲಿಗಳು, 3) 180 ಎಂ. ಎಲ್ ನ 48 ಬ್ಲ್ಯೂ-7 ವಿಸ್ಕಿ ಬಾಟಲಿಗಳು 4) 180 ಎಂ. ಎಲ್ ನ 08 ರಿಯಲ್ಸ್ XXX ರಮ್ ಬಾಟಲಿಗಳನ್ನು ಹೋಳಿ ಗುಣ್ಣಿಮ ಹಬ್ಬದ ನಿಮಿತ್ಯ ಮಾರಾಟ ಮಾಡುವ ಉದ್ದೇಶದಿಂದ ಸಂಗ್ರಹಿಸಿ ಇಟ್ಟು ಕೊಂಡಿರುವುದು ಕಂಡು ಬಂದಿದ್ದು, ಸದರಿ ಮಧ್ಯದ ಬಾಟಲಿಗಳನ್ನು ವಶಕ್ಕೆ ತೆಗೆದುಕೊಂಡು, ಪಂಚರ ಸಮಕ್ಷಮ ಪಂಚನಾಮೆ ಮಾಡಿ ಮದ್ಯದ ಬಾಟಲಿಗಳನ್ನು ವಶಪಡಿಸಿಕೊಂಡು ಪ್ರಕರಣ ದಾಖಲಿಸಿ, ತನಖೆಯಿಂದ ಆರೋಪಿ ಅಪರಾಧ

ಎಸಗಿರುವುದು ಕಂಡು ಬಂದಿದ್ದು, ರಾಸಾಯನಿಕ ಪರೀಕ್ಷೆಗೆ ಕಳುಹಿಸಿದ್ದ ಸ್ಯಾಂಪಲ್ ವರದಿ ಬಂದ ನಂತರ ಆರೋಪಿಯ ವಿರುದ್ಧ ಆರೋಪ ಸಾಬೀತಾದುದರಿಂದ ಅಂತಿಮ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಲಾಗಿದೆ ಎಂದು ಅಭಿಯೋಜನೆಯ ಮೊಕದ್ದಮೆಯಾಗಿದೆ. ಸದರಿ ಆರೋಪವನ್ನು ರುಜುವಾತುಪಡಿಸುವ ಸಲುವಾಗಿ ಅಭಿಯೋಜನೆಯವರು ಒಟ್ಟು 5 ಜನ ಸಾಕ್ಷಿದಾರರನ್ನು ಫ್ರಾಸಾ.1 ರಿಂದ 5 ರಂತೆ ವಿಚಾರಣೆ ಮಾಡಿರುತ್ತಾರೆ. ನಿಪಿ.1 ರಿಂದ 6 ದಾಖಲೆಗಳನ್ನು ಹಾಗೂ ಮು.ಮಾ.1 ರಿಂದ 4 ನ್ನು ಗುರುತಿಸಿಕೊಂಡಿರುತ್ತಾರೆ.

8. ಪ್ರಸ್ತುತ ಪ್ರಕರಣದ ಫಿರ್ಯಾದುದಾರರು ಫ್ರಾಸಾ.1 ಜಯರಾಮ ಜಿ ಹೆಗಡೆ ರವರು ಹಾಗೂ ದಾಳಿಗೆ ಸಹಕರಿಸಿದ ಸಾಕ್ಷಿದಾರರಾಗಿ ಫ್ರಾಸಾ. ಮಂಜುನಾಥ ಬಳಗಪ್ಪನವರ 2 ರವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕ 17.03.2022 ರಂದು ತಾನು ಮನೆಯಲ್ಲಿದ್ದಾಗ ತನಗೆ ಆರೋಪಿಯು ತನ್ನ ಮನೆಯ ಹಿತ್ತಲಿನಲ್ಲಿರುವ ಭತ್ತದ ಹುಲ್ಲಿನ ಬಣವೆಯಲ್ಲಿ ಹೋಳಿ ಹಬ್ಬದ ನಿಮಿತ್ತ ಗೋವಾ ರಾಜ್ಯದ ಮದ್ಯದ ಬಾಟಲಿಗಳನ್ನು ಮಾರಾಟ ಮಾಡುವ ಉದ್ದೇಶದಿಂದ ಅಕ್ರಮವಾಗಿ ಸಂಗ್ರಹ ಮಾಡಿರುವ ಬಗ್ಗೆ ಮಾಹಿತಿ ಬಂದಿದ್ದು ಸದರಿ ಮಾಹಿತಿ ಬಂದ ನಂತರ ಇಲಾಖಾ ಸಿಬ್ಬಂದಿಗಳಾದ ಚಾ.ಸಾ.4 ಮತ್ತು 5 ರವರಿಗೆ ವಿಷಯ ತಿಳಿಸಿ ಕಚೇರಿಗೆ ಬರಲು ತಿಳಿಸಿರುತ್ತೇನೆಂದು ನಂತರ ಸಿಬ್ಬಂದಿಗಳ ಜೊತೆಗೆ ನಾನು ಇಲಾಖಾ ವಾಹನದಲ್ಲಿ ಮಾಹಿತಿ ಬಂದ ತೋರಾಳಿ ಗ್ರಾಮಕ್ಕೆ ಹೊರಟಿದ್ದು, ದಾರಿಯಲ್ಲಿ ಜಾಂಬೋಟಿ ಗ್ರಾಮದ ಬಸ್ ನಿಲ್ದಾಣದ ಬಳಿ ನಿಂತಿದ್ದ ಚಾ.ಸಾ.2 ಮತ್ತು 3 ರವರಿಗೆ ತಮಗೆ ಬಂದ ಮಾಹಿತಿಯನ್ನು ತಿಳಿಸಿ ತಾವು ಮಾಡುವ ದಾಳಿಗೆ ಪಂಚರಾಗಿ ಸಹಕರಿಸುವಂತೆ ಕೋರಿಕೊಂಡಿದ್ದು ಸದರಿಯವರು ಒಪ್ಪಿ ಕೊಂಡ ಮೇರೆಗೆ ಪಂಚರುಗಳ ಜೊತೆ

ಮಾಹಿತಿ ಬಂದ ಸ್ಥಳಕ್ಕೆ ಬೆಳಿಗ್ಗೆ 9.00 ಗಂಟೆಗೆ ಹೋಗಿದ್ದು ನಂತರ ಪಂಚರ ಸಮಕ್ಷಮ ಶೋಧನಾ ವಾರಂಟನ್ನು ತಯಾರಿಸಿ ಮನೆಯನ್ನು ಪರಿಶೀಲಿಸಿದ್ದು, ನಂತರ ಮನೆಯ ಹಿತ್ತಲಿನಲ್ಲಿರುವ ಹುಲ್ಲಿನ ಬಣವೆಯಲ್ಲಿ ಶೋಧಿಸಿದಾಗ 750 ಮಿಲಿಯ 24 ಬ್ಲೂ ಸೆವೆನ ವಿಸ್ಕಿ ಬಾಟಲಿಗಳು, 750 ಮಿಲಿಯ 4 ಮೆಕ್ ಡುವೆಲ್ಸ ತ್ರಿಬಲ್ ಎಕ್ಸ ರಮ್ ಬಾಟಲಿಗಳು, 180 ಮಿಲಿಯ 48 ಬ್ಲೂ ಸೆವೆನ ವಿಸ್ಕಿ ಬಾಟಲಿಗಳು, 180 ಮಿಲಿಯ 8 ರಿಯಲ್ ತ್ರಿಬಲ್ ಎಕ್ಸ ರಮ್ ಬಾಟಲಿಗಳು ಇರುವುದು ಕಂಡುಬಂದಿರುತ್ತದೆಂದು ಸದರಿ ಬಾಟಲಿಗಳು ಗೋವಾ ರಾಜ್ಯಕ್ಕೆ ಮಾತ್ರ ಮಾರಾಟಕ್ಕೆ ಸೀಮಿತವಾಗಿದ್ದು, ಸದರಿ ಬಾಟಲಿಗಳನ್ನು ಅಕ್ರಮವಾಗಿ ಸಾಗಾಟ ಮಾಡಿ ಮಾರಾಟ ಮಾಡುವ ಉದ್ದೇಶದಿಂದ ಸಂಗ್ರಹಿಸಿದ ಬಗ್ಗೆ ಖಚಿತವಾಗಿದ್ದು ನಂತರ ಮನೆಯಲ್ಲಿ ಹುಡುಕಿದಾಗ ಆರೋಪಿಯ ಆಧಾರ ಕಾರ್ಡನ ನಕಲು ಪ್ರತಿ ದೊರೆತಿದ್ದು, ನಂತರ ಸುತ್ತ ಮುತ್ತಲಿನ ಜನರನ್ನು ಪಂಚರಾಗಿ ಮಹಜರಗೆ ಸಹಕರಿಸುವಂತೆ ಕೋರಿಕೊಂಡಿದ್ದು ನಂತರ ತಾವು ಕರೆದುಕೊಂಡು ಹೋದ ಮಹಜರ ಸಾಕ್ಷಿದಾರರ ಸಮಕ್ಷಮ ಮನೆಯ ಅಂಗಳದಲ್ಲಿ ಮಹಜರ ಕ್ರಮ ಜರುಗಿಸಿದ್ದು, ಮಹಜರ ಮೂಲಕ ರಾಸಾಯನಿಕ ಪರೀಕ್ಷಾ ವರದಿಗಾಗಿ ಎಲ್ಲಾ ಮಾದರಿ ಮದ್ಯದಿಂದ ತಲಾ ಒಂದೊಂದು ಬಾಟಲಿಗಳನ್ನು ಪ್ರತ್ಯೇಕವಾಗಿ ತೆಗೆದು ಸೀಲು ಮಾಡಿ ತನ್ನ ಹಾಗೂ ಪಂಚರ ಸಹಿಯುಳ್ಳ ಚೀಟಿಯನ್ನು ಅಂಟಿಸಿದ್ದು ನಂತರ ಜಪ್ತು ಪಡಿಸಿದ ಮುದ್ದೆ ಮಾಲುಗಳ ಜೊತೆ ಕಚೇರಿಗೆ ವಾಪಸ್ಸಾಗಿದ್ದು ಚಾಸಾ.1 ರವರು ಸರ್ಕಾರದ ಪರವಾಗಿ ಸ್ವ ಫಿರ್ಯಾದವನ್ನು ತಯಾರಿಸಿ, ಕರ್ನಾಟಕ ಅಬಕಾರಿ ಕಾಯ್ದೆ ಕಲಂ 32, 34 ರಡಿ ಪ್ರಕರಣ ದಾಖಲಿಸಿಕೊಂಡು ನ್ಯಾಯಾಲಯಕ್ಕೆ ನಿವೇದಿಸಿಕೊಂಡಿದ್ದು ನಂತರ ಕಡತವನ್ನು

ಮುಂದಿನ ತನಿಖೆಗಾಗಿ ಚಾ.ಸಾ.8 ರವರಿಗೆ ವಹಿಸಿಕೊಟ್ಟಿರುತ್ತೇನೆಂದು ತಮ್ಮ ಕರ್ತವ್ಯದ ಬಗ್ಗೆ ಸಾಕ್ಷ್ಯನುಡಿದಿರುತ್ತಾರೆ.

9. ಪ್ರಸ್ತುತ ಪ್ರಕರಣದ ಮಹಜರ ಸಾಕ್ಷಿದಾರರಾದ ಫ್ರಾಸಾ. 3 ಶಿವಾನಂದ ಚಲವಾದಿ ಮತ್ತು ಫ್ರಾಸಾ. 4 ಅರ್ಜುನ ಯಲ್ಲಪ್ಪಾ ಚನ್ನಪ್ಪಗೋಳ ರವರು ತಮ್ಮ ಸಾಕ್ಷ್ಯದಲ್ಲಿ ಮಹಜರಿಗೆ ತಾವು ಸುಮಾರು 2 ವರ್ಷಗಳ ಹಿಂದೆ ಖಾನಾಪೂರ ಅಬಕಾರಿ ಕಛೇರಿಯಲ್ಲಿ ಸಹಿ ಮಾಡಿರುತ್ತೇವೆಂದು, ಮಹಜರಲ್ಲಿ ಬರೆದ ವಿಷಯ ತಮಗೆ ಗೋತ್ತಿಲ್ಲ ತಮ್ಮ ಸಮಕ್ಷಮ ಯಾವುದೇ ಮುದ್ದೆ ಮಾಲಗಳನ್ನು ಅಮಾನತ್ತು ಪಡಿಸಿಕೊಂಡಿರುವುದಿಲ್ಲ ಅಭಿಯೋಜನೆಯ ಪ್ರಕರಣಕ್ಕೆ ತದ್ವಿರುದ್ಧವಾಗಿ ಪ್ರತಿಕೂಲ ಸಾಕ್ಷ್ಯವನ್ನು ನುಡಿದಿರುತ್ತಾರೆ ಮಾನ್ಯ ಸಹಾಯಕ ಅಭಿಯೋಜನಕರು ಫ್ರಾಸಾ. 3 ಮತ್ತು 4 ರವರನ್ನು ಪ್ರತಿಕೂಲ ಸಾಕ್ಷಿದಾರರಾಗಿ ಪರಿಗಣಿಸಿ ಪಾಟೀಸಾವಾಲು ಮಾಡಿದ್ದರು ನಿಪಿ. 2 ಮಹಜರಿಗೆ ಪೂರಕವಾಗಿ ಯಾವುದೇ ಅಂಶವನ್ನು ಹೊರತರುವಲ್ಲಿ ವಿಫಲರಾಗಿರುತ್ತಾರೆ.

10. ಪ್ರಕರಣ ತನಿಖಾಧಿಕಾರಿಯಾದ ಫ್ರಾಸಾ.5 ದಾವಲಸಾಬ ಶಿಂದೋಗಿ ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿನಾಂಕ 21.03.2022 ರಂದು ಪ್ರಸ್ತುತ ಪ್ರಕರಣದ ಕಡತವನ್ನು ತನಿಖೆಗಾಗಿ ಚಾ.ಸಾ.1 ರವರಿಂದ ಪಡೆದುಕೊಂಡಿದ್ದು, ದಿನಾಂಕ 27.04.2022 ರಂದು ಸ್ಯಾಂಪಲ್ ಬಾಟಲಿಗಳನ್ನು ರಾಸಾಯನಿಕ ಪರೀಕ್ಷೆಗಾಗಿ ಚಾ.ಸಾ.4 ರವರ ಮೂಲಕ ಫ್ರಾದೇಶಿಕ ರಾಸಾಯನಿಕ ಪ್ರಯೋಗಾಲಯ ಧಾರವಾಡಕ್ಕೆ ಕಳುಹಿಸಿಕೊಟ್ಟಿದ್ದು, ದಿನಾಂಕ 06.05.2022 ರಂದು ಸದರಿ ರಾಸಾಯನಿಕ ಪರೀಕ್ಷಾ ವರದಿಯನ್ನು ಚಾ.ಸಾ.4 ರವರು ತಂದು ಹಾಜರುಪಡಿಸಿದ

ಮೇರೆಗೆ ಅದನ್ನು ಸ್ವೀಕರಿಸಿ ಕಡತಕ್ಕೆ ಅಳವಡಿಸಿಕೊಂಡಿದ್ದು, ದಿನಾಂಕ 30.04.2022 ರಂದು ದಾಳಿ ಮಾಡಿದ ಮನೆಯ ಉತಾರವನ್ನು ಹಾಜರುಪಡಿಸುವಂತೆ ಗೊಲ್ಯಾಳಿ ಗ್ರಾಮ ಪಂಚಾಯಿತಿಯ ಪಿ.ಡಿ.ಓ ರವರಿಗೆ ಪತ್ರ ಬರೆದು ನಿವೇದಿಸಿಕೊಂಡಿದ್ದು ದಿನಾಂಕ 05.11.2022 ರಂದು ಸದರಿ ಉತಾರ ಹಾಗೂ ದೃಡೀಕರಣ ಪತ್ರವನ್ನು ಸ್ವೀಕರಿಸಿ ಕಡತಕ್ಕೆ ಅಳವಡಿಸಿಕೊಂಡಿದ್ದು, ಸದರಿ ದಾಖಲೆಯ ಪ್ರಕಾರ ಮನೆಯ ಮಾಲಿಕನಿಗೆ ದಿನಾಂಕ 13.05.2022 ರಂದು ನೋಟೀಸನ್ನು ನೀಡಿದ್ದು ಸದರಿಯವರು ತನ್ನ ಮುಂದೆ ಹಾಜರಾಗಿದ್ದು ಅವರನ್ನು ವಿಚಾರಿಸಿ ಹೇಳಿಕೆ ಪಡೆದುಕೊಂಡಿದ್ದು, ನಂತರ ಪಂಚರುಗಳಾದ ಚಾ.ಸಾ.2 ಮತ್ತು 3 ರವರ ಹೇಳಿಕೆ ಪಡೆದುಕೊಂಡಿದ್ದು ನಂತರ ದಾಳಿಯಲ್ಲಿ ಭಾಗವಹಿಸಿದ ಚಾ.ಸಾ.4 ಮತ್ತು 5 ರವರ ಹೇಳಿಕೆ ಹಾಗೂ ಪುನರ್ ಹೇಳಿಕೆಗಳನ್ನು ಪಡೆದುಕೊಂಡಿದ್ದು ನಂತರ ಸ್ಯಾಂಪಲ್ ಬಾಟಲಿಗಳನ್ನು ಹೊರತುಪಡಿಸಿ ಉಳಿದ ಮದ್ಯದ ಬಾಟಲಿಗಳನ್ನು ಮುಟ್ಟುಗೋಲು ಹಾಕಿಕೊಳ್ಳಲು ಅಬಕಾರಿ ಉಪ ಅಧೀಕ್ಷಕರು, ಬೆಳಗಾವಿರವರಿಗೆ ಕೋರಿಕೊಂಡಿದ್ದು ಸದರಿಯವರ ಅನುಮತಿಯ ಮೇರೆಗೆ ಉಳಿದ ಮುದ್ದೆ ಮಾಲುಗಳನ್ನು ಇಲಾಖೆಯ ಪರವಾಗಿ ಮುಟ್ಟುಗೋಲು ಹಾಕಿಕೊಳ್ಳಲಾಗಿದ್ದು ನಂತರ ತನಿಖೆ ಮುಕ್ತಾಯವಾಗಿದ್ದು ಆರೋಪಿಯ ವಿರುದ್ದ ನ್ಯಾಯಾಲಯಕ್ಕೆ ಅಂತಿಮ ದೋಷಾರೋಪಣ ಪಟ್ಟಿ ಸಲ್ಲಿಸಿರುತ್ತೇನೆಂದು ತಮ್ಮ ಕರ್ತವ್ಯದ ಬಗ್ಗೆ ಸಾಕ್ಷ್ಯವನ್ನು ನುಡಿದಿರುತ್ತಾರೆ.

11. ಅಭಿಯೋಜನೆಯ ಪರ ಸಾಕ್ಷಿದಾರರುಗಳನ್ನು ಆರೋಪಿಯ ಪರ ವಕೀಲರು ಪಾಟೀಸವಾಲು ಮಾಡಿದ್ದು, ಆರೋಪಿಯ ಪರ ವಕೀಲರ ಪ್ರತಿರಕ್ಷಣೆ ಏನೆಂದರೆ, ಆರೋಪಿಯು ಅಭಿಯೋಜನೆಯವರು ಆರೋಪಿಸಿದಂತೆ ಯಾವುದೇ

ಮಧ್ಯದ ಬಾಟಲಿಗಳನ್ನು ಅಕ್ರಮವಾಗಿ ಸಂಗ್ರಹಿಸಿರಲಿಲ್ಲ, ತನಿಖಾಧಿಕಾರಿಯು ಆರೋಪಿಯೇ ಉದ್ದೇಶ ಪೂರಕವಾಗಿ ತನ್ನ ಮನೆಯಲ್ಲಿ ಮಧ್ಯವನ್ನು ಸಂಗ್ರಹಿಸಿದ ಬಗ್ಗೆ ಸಾಕ್ಷಿಯನ್ನು ಸಂಗ್ರಹಿಸದೇ ಆರೋಪಿಯ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿರುತ್ತಾರೆ ಮತ್ತು ಮಹಜರ್ ಸಾಕ್ಷಿದಾರರು ಪ್ರತಿಕೂಲ ಸಾಕ್ಷಿದಾರರಾಗಿ ಸಾಕ್ಷ್ಯವನ್ನು ನುಡಿದಿದ್ದು, ಘಟನೆಗೆ ಯಾವುದೇ ಸ್ವತಂತ್ರ ಸಾಕ್ಷಿದಾರರುಗಳು ಇರುವುದಿಲ್ಲ. ಚಾಸಾ.1 ರವರು ಆರೋಪಿತನ ಮೇಲೆ ಇಲಾಖಾ ಅಂಕಿ ಅಂಶಗೋಸ್ಕರವಾಗಿ ಆರೋಪಿಯು ಯಾವುದೇ ತಪ್ಪು ಮಾಡದಿದ್ದರು ಆರೋಪಿತನ ಮೇಲೆ ಉದ್ದೇಶ ಪೂರ್ವಕವಾಗಿ ಸುಳ್ಳು ಪ್ರಕರಣವನ್ನು ದಾಖಲಿಸಿದ್ದು, ತನಿಖೆಯಲ್ಲಿ ಲೋಪವಿದ್ದರೂ ಚಾಸಾ. 1 ರವರ ಪ್ರಭಾವದಿಂದ ಚಾಸಾ. 8 ರವರು ಸುಳ್ಳು ದೋಷಾರೋಪಣಾ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ ಎಂಬುದಾಗಿರುತ್ತದೆ.

12. ಪ್ರಸ್ತುತ ಪ್ರಕರಣದಲ್ಲಿ ಮಹಜರ್ ಸಾಕ್ಷಿದಾರರರಾದ ಫ್ರಾಸಾ. 3 ಮತ್ತು 4 ನಿಪಿ.2 ಮಹಜರಿಗೆ ವಿರುದ್ಧವಾಗಿ ಪ್ರತಿಕೂಲ ಸಾಕ್ಷ್ಯವನ್ನು ನುಡಿದಿದ್ದರು, ಸದರಿ ಸಾಕ್ಷಿದಾರರನ್ನು ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಪಾಟೀಸವಾಲಿಗೆ ಒಳಪಡಿಸಿದ್ದು, ನಿಪಿ.2 ಮಹಜರಿಗೆ ಪೂರಕವಾಗಿ ಯಾವುದೇ ಅಂಶಗಳನ್ನು ಹೊರ ತರುವಲ್ಲಿ ವಿಫಲರಾಗಿರುತ್ತಾರೆ. ಫ್ರಾಸಾ. 1 ರವರು ತಮ್ಮ ಪಾಟೀ ಸವಾಲಿನಲ್ಲಿ ಆರೋಪಿ ಪರ ವಕೀಲರು ಆರೋಪಿಯ ಮನೆಯಲ್ಲಿ ಹುಲ್ಲಿನ ಬಣವೆ ಮನೆಯ ಹಿತ್ತಲಿನಲ್ಲಿದ್ದು, ಬೇರೆ ಯಾರಾದರು ತಂದು ಇಟ್ಟಿರುವ ಸಾಧ್ಯತೆ ಇರುತ್ತದೆ ಎಂದರೆ ಫ್ರಾಸಾ. 1 ರವರು ತಮಗೆ ಬಂದ ಮಾಹಿತಿಯ ಪ್ರಕಾರ ದಾಳಿ ಮಾಡಿದ್ದು, ಆರೋಪಿ ಕೃತ್ಯ ಎಸಗಿರುತ್ತಾನೋ ಇಲ್ಲವೊ ಎನ್ನುವುದನ್ನು ರುಜುವಾತು ಪಡಿಸುವುದು

ತನಿಖಾಧಿಕಾರಿಯ ಕರ್ತವ್ಯ ವಾಗಿರುತ್ತದೆಂದು ಉತ್ತರಿಸಿದ್ದು, ಈ ಬಗ್ಗೆ ತನಿಹಾಧಿಕಾರಿಯಾದ ಫ್ರಾಸಾ. 5 ರವರ ಸಾಕ್ಷ್ಯವನ್ನು ಪರಿಶೀಲಿಸಿದಾಗ ಆರೋಪಿಯೇ ಅಭಿಯೋಜನೆಯು ಆರೋಪಿಸಿದಂತೆ ಮಧ್ಯದ ಬಾಟಲಿಗಳನ್ನು ಸಂಗ್ರಹಿಸಿದ್ದ ಬಗ್ಗೆ ತನಿಖಾಧಿಕಾರಿಯು ತನಿಖೆ ನಡೆದಿ ಸಾಕ್ಯೆದಾರವನ್ನು ಸಂಗ್ರಹಿಸಿರುವ ಬಗ್ಗೆ ಯಾವುದೇ ಅಂಶವು ಕಂಡು ಬಂದಿರುವುದಿಲ್ಲ. ಫ್ರಾಸಾ. 5 ರವರು ತಮ್ಮ ಸಾಕ್ಷ್ಯದಲ್ಲಿ ದಾಳಿ ಮಾಡಿದ ಮನೆಯ ಮಾಲೀಕನಿಗೆ ನೋಟಿಸ್ ನೀಡಿ ಆತನನ್ನು ವಿಚಾರಣೆ ಮಾಡಿದ್ದು, ಸದರಿ ವಿವಾರಣೆಯಲ್ಲಿ ಆರೋಪಿಯೇ ಮಧ್ಯದ ಬಾಟಲಿಗಳನ್ನು ಅಕ್ರಮವಾಗಿ ಸಂಗ್ರಹಿಸಿದ ಬಗ್ಗೆ ಹೇಳಿಕೆ ನೀಡಿರುತ್ತಾರೆಂದು ನುಡಿದಿದ್ದು, ಈ ಬಗ್ಗೆ ಕಡತದಲ್ಲಿ ಹಾಜರು ಪಡಿಸಿರುವ ಸದರಿ ಹೇಳಿಕೆಯನ್ನು ಪರಿಶೀಲಿಸಿದಾಗ ಮನೆಯ ಮಾಲೀಕನಾದ ಚಾಸಾ. 7 ರವರು ತಮ್ಮ ಸ್ವಹಿಚ್ಚೆಯಿಂದ ಹೇಳಿಕೆ ನೀಡಿರುವ ಬಗ್ಗೆ ಯಾವುದೇ ಅಂಶವು ಕಂಡು ಬಂದಿರುವುದಿಲ್ಲ. ಬದಲಿಗೆ ತನಿಖಾಧಿಕಾರಿಯು ಪ್ರಕರಣಕ್ಕೆ ಅನುಕೂಲವಾಗುವಂತೆ ಹೇಳಿಕೆ ಪಡೆದುಕೊಂಡಿರುವುದು ಕಂಡು ಬಂದಿದ್ದು ಸದರಿ ಹೇಳಿಕೆಯ ಆಧಾರದ ಮೇರೆಗೆ ಆರೋಪಿಯೇ ಅಭಿಯೋಜನೆಯು ಆರೋಪಿಸಿದಂತೆ ಕೃತ್ಯ ಎಸಗಿರುವುದನ್ನು ಪೂರ್ವಭಾವನೆ ಮಾಡಲು ಬರುವುದಿಲ್ಲ.

13. ಮುಂದುವರೆದು, ಆರೋಪಿಯ ಪರ ವಕೀಲರ ಪ್ರತಿರಕ್ಷಣೆ ಏನೆಂದರೆ, ಫಿರ್ಯಾದಿ ಪೊಲೀಸಿನವರು ತಾವು ವಶಪಡಿಸಿಕೊಂಡ ಎಲ್ಲಾ ಮಧ್ಯದ ಬಾಟಲಿಗಳನ್ನು ರಾಸಾಯನಿಕ ಪರೀಕ್ಷೆಗೆ ಕಳುಹಿಸಿರುವುದಿಲ್ಲ ಹಾಗೂ ಅವುಗಳನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿರುವುದಿಲ್ಲ. ರಾಸಾಯನಿಕ ಪರೀಕ್ಷೆಗೆ

ಎಲ್ಲಾ ಮಧ್ಯದಿಂದ ತಲಾ ಒಂದೊಂದು ಬಾಟಲಿಗಳನ್ನು ಕಳುಹಿಸಿರುತ್ತಾರೆ. ಆದುದರಿಂದ ಆರೋಪಿಯು ಅಬಕಾರಿ ಕಾಯ್ದೆಯ ಪ್ರಕಾರ ಅಪರಾಧವನ್ನು ಮಾಡಿರುತ್ತಾನೆಂದು ರುಜುವಾತು ಮಾಡಲು ಬರುವುದಿಲ್ಲ ಎಂದು ತಮ್ಮ ವಾದ ಮಂಡನೆ ಮಾಡಿರುತ್ತಾರೆ.

14. ನಿಪಿ.2 ದೂರು ಆಗಿದ್ದು, ನಿಪಿ.2 ಮಹಜರ ಪರೀಕ್ಷಾ ವರದಿಯಾಗಿದ್ದು, ಸದರಿ ನಿಪಿ.2 ಮಹಜರ್ ಪ್ರಕಾರ ಆರೋಪಿತನಿಂದ ಗೋವಾ ರಾಜ್ಯದಲ್ಲಿ ಮಾತ್ರ ಮಾರಾಟಕ್ಕಿದ್ದ 1) 750 ಎಂ. ಎಲ್ ನ 24 ಬ್ಲ್ಯೂ-7 ವಿಸ್ಕಿ ಬಾಟಲಿಗಳು 2) 750 ಎಂ.) ಎಲ್ ನ 4 ಮೆಕಡೋವೆಲ್ಸ XXX ರಮ್ ಬಾಟಲಿಗಳು, 3) 180 ಎಂ. ಎಲ್ ನ 48 ಬ್ಲ್ಯೂ -7 ವಿಸ್ಕಿ ಬಾಟಲಿಗಳು 4) 180 ಎಂ. ಎಲ್ ನ 08 ರಿಯಲ್ಸ್ XXX ರಮ್ ಬಾಟಲಿಗಳನ್ನು ವಶಪಡಿಸಿಕೊಂಡಿದ್ದಾಗಿ ನಮೂದಿಸಿದ್ದು, ಸದರಿ ಎಲ್ಲಾ ಮಧ್ಯದಿಂದ ತಲಾ ಒಂದೊಂದು ಬಾಟಲಿಗಳನ್ನು ರಾಸಾಯನಿಕ ಪರೀಕ್ಷೆಗಾಗಿ ಪ್ರತ್ಯೇಕವಾಗಿ ತೆಗೆದು ಸೀಲು ಮಾಡಿರುತ್ತೇವೆಂದು ನಮೂದಿಸಿದ್ದು, ಅದರಂತೆ ಅಭಿಯೋಜನೆಯ ಸಾಕ್ಷಿದಾರರಾದ ಫಾ್ರಸಾ.1 ರವರು ತಮ್ಮ ಸಾಕ್ಷ್ಯವನ್ನು ನುಡಿದಿದ್ದು, ಈ ಬಗ್ಗೆ ಕಡತದಲ್ಲಿರುವ ರಾಸಾಯನಿಕ ಪರೀಕ್ಷಾ ವರದಿಯನ್ನು ಪರಿಶೀಲಿಸಿದಾಗ ಸದರಿ ವರದಿಯಲ್ಲಿ1) 750 ಎಂ. ಎಲ್ ನ 24 ಬ್ಲ್ಯೂ-7 ವಿಸ್ಕಿ ಬಾಟಲಿಗಳು 2) 750 ಎಂ.) ಎಲ್ ನ 4 ಮೆಕಡೋವೆಲ್ಸ XXX ರಮ್ ಬಾಟಲಿಗಳು, 3) 180 ಎಂ. ಎಲ್ ನ 48 ಬ್ಲ್ಯೂ -7 ವಿಸ್ಕಿ ಬಾಟಲಿಗಳು 4) 180 ಎಂ. ಎಲ್ ನ 08 ರಿಯಲ್ಸ್ XXX ರಮ್ ಬಾಟಲಿಗಳನ್ನು ಪರೀಕ್ಷಿಸಲಾಗಿ ಅದರಲ್ಲಿ ಆಲ್ಕೋಹಾಲ್ ಅಂಶ ಕಂಡು ಬಂದಿರುತ್ತದೆ ಎಂದು ವರದಿಯನ್ನು ನೀಡಿರುತ್ತಾರೆ. ಮು.ಮಾ.1 ರಿಂದ 4 ರಾಸಾಯನಿಕ ಪರೀಕ್ಷೆಗಾಗಿ ತೆಗೆದ ಸ್ಯಾಂಪಲ್ ಬಾಟಲಿ ಆಗಿರುತ್ತದೆ.

14. As per the citation reported in 1966(2) Kar.L.J. 91:

> "Where ten bottles were seized from the petitioner the bottles having labels of brandy etc., the contents of one bottle was sent to the chemical examiner and it contained 650 ML.
> **Held:** The absence of evidence to show that other nine bottles also contained brandy or other intoxicant petitioner could not be convicted under section 34 of the Excise Act by only relying on the labels of the bottles."

15. ಇದೇ ರೀತಿ ಆರ್.ರಂಗಯ್ಯ ಃ ವಿರುದ್ಧ ಃ ಕರ್ನಾಟಕ ಸರ್ಕಾರ 1982(2), ಪಾರ್ಟ್ 7 ಕ್ರೈಮ್ಸರಲ್ಲೂ ಸಹ ರಾಸಾಯನಿಕ ಪರೀಕ್ಷೆಗೆ ಕಾಯ್ದಿರಿಸಿದ ಸ್ಯಾಂಪಲ್‌ನ್ನು ಹೊರತುಪಡಿಸಿ ಉಳಿದವುಗಳಲ್ಲಿ ಸಹ ಆಲ್ಕೋಹಾಲ್ ಅಥವಾ ವಿಷಕಾರಿ ಅಂಶ ಇತ್ತು ಎಂದು ತೋರಿಸುವುದರ ಬಗ್ಗೆ ಯಾವುದೇ ಸಾಕ್ಷ್ಯವಿರುವುದಿಲ್ಲ ಎಂದು ನಿರ್ಣಯಿಸಿರುವುದು ಕಂಡುಬಂದಿರುತ್ತದೆ.

16. ಪ್ರಸ್ತುತ ಪ್ರಕರಣದಲ್ಲಿ ಅಭಿಯೋಜನೆಯ ಮೊಕದ್ದಮೆ ಪ್ರಕಾರ ಗೋವಾ ರಾಜ್ಯದ 1) 750 ಎಂ. ಎಲ್ ನ 24 ಬ್ಲ್ಯೂ-7 ವಿಸ್ಕಿ ಬಾಟಲಿಗಳು 2) 750 ಎಂ.) ಎಲ್ ನ 4 ಮೆಕಡೋವೆಲ್ಸ XXX ರಮ್ ಬಾಟಲಿಗಳು, 3) 180 ಎಂ. ಎಲ್ ನ 48 ಬ್ಲ್ಯೂ-7 ವಿಸ್ಕಿ ಬಾಟಲಿಗಳು 4) 180 ಎಂ. ಎಲ್ ನ 08 ರಿಯಲ್ಸ್ XXX ರಮ್ ಬಾಟಲಿಗಳನ್ನು ವಶಪಡಿಸಿಕೊಂಡಿದ್ದು, ಅದರಲ್ಲಿ ಎಲ್ಲಾ ಮದ್ಯದಿಂದ ತಲಾ ಒಂದೊಂದು ಬಾಟಲಿಗಳನ್ನು ಮಾತ್ರ ರಾಸಾಯನಿಕ ಪರೀಕ್ಷೆಗೆ ಕಳುಹಿಸಿ ಉಳಿದ ಮದ್ಯದ ಬಾಟಲಿಗಳನ್ನು ಪರೀಕ್ಷೆಗೆ ಕಳುಹಿಸಿರುವುದಿಲ್ಲ. ಆದುದರಿಂದ ಉಳಿದ ಮದ್ಯದ

ಬಾಟಲಿಗಳಲ್ಲಿ ಸಹ ಮು.ಮಾ.1 ರಿಂದ 4 ರಂತೆ ಮದ್ಯ ಅಥವಾ ವಿಷಕಾರಿ ಅಂಶ ಇತ್ತು ಎಂಬುದನ್ನು ಪರಿಗಣಿಸಲು ಬರುವುದಿಲ್ಲ.

17. ಕರ್ನಾಟಕ ಅಬಕಾರಿ ನಿಯಮ 21 ರ ಪ್ರಕಾರ ಕಾನೂನು ಪ್ರಕಾರವಾಗಿ ಒಬ್ಬ ವ್ಯಕ್ತಿಯು ತನ್ನ ಬಳಿ ಸುಮಾರು 4.1 ಲೀಟರ್ ನಷ್ಟು ಮದ್ಯವನ್ನು ಯಾವುದೇ ಪರವಾನಗಿ ಇಲ್ಲದೇ ಇಟ್ಟುಕೊಳ್ಳಬಹುದಾಗಿದ್ದು, 4.1 ಲೀಟರ್ ಗಿಂತ ಹೆಚ್ಚಿನ ಮದ್ಯವನ್ನು ಹೊಂದಿದ್ದರೆ ಅದಕ್ಕೆ ಅವನು ಪರವಾನಗಿ ಹೊಂದಿರಬೇಕು, ಇಲ್ಲದಿದ್ದಲ್ಲಿ ಸದರಿ ಮದ್ಯವನ್ನು ಅಕ್ರಮವಾಗಿ ಸ್ವಾಧೀನದಲ್ಲಿ ಹೊಂದಿದ್ದಾನೆಂದು ಪರಿಗಣಿಸಬೇಕಾಗುತ್ತದೆ. ಪ್ರಸ್ತುತ ಪ್ರಕರಣದಲ್ಲಿ ಮು.ಮಾ.1 ರಿಂದ 4 ನ್ನು ಮೇಲ್ಕಂಡಂತೆ ರಾಸಾಯನಿಕ ಪರೀಕ್ಷೆಗೆ ಪ್ರತ್ಯೇಕವಾಗಿ ಅಮಾನತುಪಡಿಸಿಕೊಂಡ ಮದ್ಯದ ಬಾಟಲಿ ಆಗಿದ್ದು, ಉಳಿದ ಮದ್ಯದ ಬಾಟಲಿಗಳನ್ನು ರಾಸಾಯನಿಕ ಪರೀಕ್ಷೆಗೆ ಕಳುಹಿಸದೇ ಇರುವುದರಿಂದ ಆರೋಪಿಯು ಸದರಿ ನಿಯಮದ ಅನ್ವಯ 4.1 ಲೀಟರ್ ಗಿಂತ ಹೆಚ್ಚಿನ ಮದ್ಯವನ್ನು ತನ್ನ ಬಳಿ ಸ್ವಾಧೀನ ಹೊಂದಿದ್ದ ಎಂದು ಅಭಿಯೋಜನೆಯವರು ಸೂಕ್ತ ದಾಖಲಾತಿಗಳ ಮೂಲಕ ನಿಪಿ.2 ನ್ನು ಸಾಬೀತುಪಡಿಸುವಲ್ಲಿ ವಿಫಲರಾಗಿರುತ್ತಾರೆ. ಮುಂದುವರೆದು ಕರ್ನಾಟಕ ಅಬಕಾರಿ ಕಾಯ್ದೆ ಕಲಂ 43 ರ ಪ್ರಕಾರ ಅಬಕಾರಿ ಅಧಿಕಾರಿಗಳಿಗೆ ದಾಳಿಯಲ್ಲಿ ಸಿಕ್ಕ ವಾಹನಗಳನ್ನು ಅಮಾನತು ಪಡಿಸಿಕೊಳ್ಳುವ ಬಗ್ಗೆ ನಿಯಮವಿದ್ದು, ಸದರಿ ಕಲಂ ಅಡಿ ಯಾವುದೇ ಶಿಕ್ಷಾರ್ಹವಾದ ಅಪರಾಧಕ್ಕೆ ಶಿಕ್ಷೆಯನ್ನು ನಿಗಧಿ ಪಡಿಸಿರುವುದಿಲ್ಲ ಆದುದರಿಂದ ಸದರಿ ಕಲಂ 43 ಪ್ರಸ್ತುತ ಪ್ರಕರಣಕ್ಕೆ ಅನ್ವಯವಾಗುವುದಿಲ್ಲ.

18. ಮೇಲ್ಕಂಡಂತೆ ಅಭಿಯೋಜನೆಯ ಪರ ಸಾಕ್ಷಿದಾರರುಗಳ ನುಡಿ ಸಾಕ್ಷ್ಯ ದಾಖಲಾತಿಗಳನ್ನು ಕೂಲಂಕಷವಾಗಿ ಪರಿಶೀಲಿಸಿದಾಗ ಅಭಿಯೋಜನೆಯವರು ಸಂಶಯಾತೀತವಾಗಿ ಆರೋಪಿತರು ಕರ್ನಾಟಕ ಅಬಕಾರಿ ಕಾಯ್ದೆ ಕಲಂ 32, ಮತ್ತು 34 ರ ರೀತ್ಯಾ ಶಿಕ್ಷಾರ್ಹವಾದ ಅಪರಾಧವನ್ನು ಮಾಡಿರುತ್ತಾರೆ ಎಂಬುದನ್ನು ರುಜುವಾತುಪಡಿಸುವಲ್ಲಿ ವಿಫಲರಾಗಿರುತ್ತಾರೆ. ಆದುದರಿಂದ ಅಂಶ ಸಂಖ್ಯೆಗಳು 1 ಮತ್ತು 2 ನ್ನು ನಕಾರಾತ್ಮಕವಾಗಿ ಉತ್ತರಿಸಲಾಗಿದೆ.

19. <u>ಅಂಶ ಸಂಖ್ಯೆ 3</u>**:** ಅಂಶ ಸಂಖ್ಯೆಗಳು 1 ಮತ್ತು 2 ರ ಮೇಲೆ ಚರ್ಚಿಸಲಾದ ಕಾರಣಗಳಿಂದ ಹಾಗೂ ಬಂದ ತೀರ್ಮಾನದಂತೆ ಈ ಕೆಳಕಂಡಂತೆ ಆದೇಶವನ್ನು ಮಾಡಲಾಗಿದೆ.

<u>ಆದೇಶ</u>

ದಂಡ ಪ್ರಕ್ರಿಯಾ ಸಂಹಿತೆ ಕಲಂ 248(1) ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸುತ್ತಾ ಕರ್ನಾಟಕ ಅಬಕಾರಿ ಕಾಯ್ದೆ ಕಲಂ 32 ಮತ್ತು 34 ರಡಿ ಶಿಕ್ಷಾರ್ಹವಾದ ಅಪರಾಧಕ್ಕಾಗಿ ಆರೋಪಿಯನ್ನು ನಿರಪರಾಧಿ ಎಂದು ನಿರ್ಣಯಿಸಿ ಬಿಡುಗಡೆ ಮಾಡಲಾಗಿದೆ.

ಆರೋಪಿ ಹಾಗೂ ಆರೋಪಿ ಪರ ಜಾಮೀನುದಾರರು ಬರೆದುಕೊಟ್ಟಿರುವ ಜಾಮೀನು ಮುಚ್ಚಳಿಕೆ ಮೇಲ್ಮನವಿ ಅವಧಿ ಮುಗಿಯುವವರೆಗೆ ಚಾಲ್ತಿಯಲ್ಲಿರುತ್ತದೆ.

ಮು.ಮಾ.1 ರಿಂದ 4 ನಿರುಪಯುಕ್ತ ವಸ್ತುವಾಗಿರುವುದರಿಂದ ಮೇಲ್ಮನವಿ ಅವಧಿ ಮುಗಿದ ನಂತರ ನಾಶಪಡಿಸಲು ಆದೇಶಿಸಲಾಗಿದೆ.

(ಈ ತೀರ್ಪನ್ನು ಶೀಘ್ರಲಿಪಿಗಾರ್ತಿಗೆ ನನ್ನ ಉಕ್ತಲೇಖನದಂತೆ ನೇರವಾಗಿ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿದ ನಂತರ, ಅದನ್ನು ಓದಿ, ತಪ್ಪುಗಳನ್ನು ತಿದ್ದಿ ಬಹಿರಂಗ ನ್ಯಾಯಾಲಯದಲ್ಲಿ ದಿನಾಂಕ 08 ನೇ ದಿವಸ ಏಪ್ರಿಲ್ ಮಾಹೆ 2024 ರಂದು ನಾನು ಘೋಷಿಸಿರುತ್ತೇನೆ.)

**(ಸೂರ್ಯನಾರಾಯಣ ಎಸ್.)**
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ., ಖಾನಾಪೂರ.

<u>ಅನುಬಂಧ</u>

<u>ಅಭಿಯೋಜನೆಯವರ ಪರವಾಗಿ ವಿಚಾರಣೆ ಮಾಡಲಾದ ಸಾಕ್ಷಿದಾರರ ಪಟ್ಟಿ:</u>

ಫ್ರಾಸಾ.1 : ಶ್ರೀ.ಜಯರಾಮ ಹೆಗಡೆ
ಫ್ರಾಸಾ.2 : ಶ್ರೀ. ಮಂಜುನಾಥ ಬಳಗಪ್ಪನವರ
ಫ್ರಾಸಾ.3 : ಶ್ರೀ.ಶಿವಾನಂದ ಚಲವಾದಿ
ಫ್ರಾಸಾ.4 : ಶ್ರೀ.ಅರ್ಜುನ ಯಲ್ಲಪ್ಪಾ ಚನ್ನಪ್ಪಗೋಳ
ಫ್ರಾಸಾ.5 : ಶ್ರೀ.ದಾವಲಸಾಬ ಶಿಂದೋಗಿ

<u>ಅಭಿಯೋಜನೆಯವರ ಪರವಾಗಿ ಗುರುತಿಸಲಾದ ದಾಖಲೆಗಳ ಪಟ್ಟಿ:</u>

ನಿಪಿ.1 : ದೂರು
ನಿಪಿ.1(ಎ) : ಫ್ರಾಸಾ.1 ರವರ ಸಹಿ
ನಿಪಿ.2 : ಮಹಜರ
ನಿಪಿ.2(ಎ) : ಫ್ರಾಸಾ.1 ರವರ ಸಹಿ
ನಿಪಿ.2(ಬಿ) : ಫ್ರಾಸಾ.3 ರವರ ಸಹಿ
ನಿಪಿ.2(ಸಿ) : ಫ್ರಾಸಾ.4 ರವರ ಸಹಿ
ನಿಪಿ.3 : ಪ್ರಥಮ ವರ್ತಮಾನ ವರದಿ
ನಿಪಿ.3(ಎ) : ಫ್ರಾಸಾ.1 ರವರ ಸಹಿ
ನಿಪಿ.4 : ರಾಸಾಯನಿಕ ಪರೀಕ್ಷ ವರದಿ
ನಿಪಿ.4(ಎ) : ಫ್ರಾಸಾ.5 ರವರ ಸಹಿ
ನಿಪಿ.5 : ಮನೆಯ ಉತಾರ
ನಿಪಿ.5(ಎ) : ಫ್ರಾಸಾ.5 ರವರ ಸಹಿ
ನಿಪಿ.6 : ಗೋಲ್ಯಾಳಿ ಗ್ರಾಮ ಪಂಚಾಯತಿಯವರು ನೀಡಿದ ದೃಢೀಕೃತ ಪತ್ರ

ನಿಪಿ.6(ಎ) : ಪ್ರಾಸಾ.5 ರವರ ಸಹಿ

ಆರೋಪಿತರ ಪರವಾಗಿ ವಿಚಾರಣೆ ಮಾಡಲಾದ ಸಾಕ್ಷಿದಾರರ ಪಟ್ಟಿ:

-- ಇಲ್ಲಾ --

ಆರೋಪಿತರ ಪರವಾಗಿ ಗುರುತಿಸಲಾದ ದಾಖಲೆಗಳ ಪಟ್ಟಿ:

-- ಇಲ್ಲಾ --

ಈ ಪ್ರಕರಣದಲ್ಲಿ ಗುರುತಿಸಲಾದ ಮುದ್ದೆ ಮಾಲುಗಳ ಪಟ್ಟಿ:

ಮು.ಮಾ.1 ರಿಂದ 4 : ಮದ್ಯದ ಬಾಟಲಿಗಳು
ಮು.ಮಾ.1(ಎ) ರಿಂದ 4(ಎ) : ಪ್ರಾಸಾ. 1 ರವರ ಸಹಿ

**(ಸೂರ್ಯನಾರಾಯಣ ಎಸ್.)**
ಪ್ರದಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ., ಖಾನಾಪುರ.